Sanction of Special pay to Officials qualified in Kannada Shorthand and Typewriting

646. Sri M. G. BANAKAR (Byadagi).—

Will the Chief Minister be pleased to state :—

(*a*) the number of Kannada Typewriters purchased by the Government ;

(*b*) in order to encourage those who have qualified themselves in Kannada Typewriting and Shorthand whether they would pay them more than at present ;

(*c*) if not, the reason therefor whether they intend to give more pay ?

Sri VEERENDRA PATIL (Chief Minister).—

(*a*) 200.

(*b*) Yes. Government have directed that I Division Clerks who are qualified in Kannada Shorthand and Typewriting may be paid a special pay of Rs. 30 per month while II Division Clerks who are qualified in Kannada Shorthand and Typewriting may be paid a special pay of Rs. 20 per month ;

(*c*) Does not arise.

ಶ್ರೀ ಎಂ. ಜಿ. ಬಣಕಾರ್.—ನಾನು ಕನ್ನಡ ಟೈಪಿಸ್ಟ್ಸ್ ವಿಷಯದಲ್ಲಿ ಪ್ರಶ್ನೆ ಕೇಳಿದ್ದೇನೆ. ಸರ್ಕಾರದವರು ಗುಮಾಸ್ತರ ವಿಷಯದಲ್ಲಿ ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು ?

† ಶ್ರೀ ವೀರೇಂದ್ರ ಪಾಟೀರ್.—(ಅ)ಗೆ ಉತ್ತರವಾಗಿ ಕನ್ನಡ ಟೈಪ್‌ರೈಟರುಗಳು 200 ಇವೆಯೆಂದು ಹೇಳಿದೆ. ಮೊದಲನೆಯ ದರ್ಜೆಯ ಗುಮಾಸ್ತರಿಗೆ 30 ರೂಪಾಯಿಗಳಂತೆಯೂ, ಎರಡನೆಯ ದರ್ಜೆಯ ಗುಮಾಸ್ತರಿಗೆ 20 ರೂಪಾಯಿಗಳಿಂತೆ ವಿಶೇಷ ವೇತನವನ್ನು ಕೊಡ ಬಹುದೆಂದು ಹೇಳಿದೆ.

ಶ್ರೀ ಎಂ. ಜಿ. ಬಣಕಾರ್.—ಪ್ರಥಮ ದರ್ಜೆ ಮತ್ತು ಎರಡನೆ ದರ್ಜೆ ಗುಮಾಸ್ತರು ಕನ್ನಡ ಟೈಪಿಸ್ಟ್ಸ್‌ಗಳಾಗಿ ಕೆಲಸಮಾಡುತ್ತಿದ್ದರೆ, ಅಂತಹವರಿಗೆ ವಿಶೇಷ ವೇತನ ಕೊಡುತ್ತೇವೆಂದು ಹೇಳು ತ್ತೀರಿ. ನಾನು ಬರೀ ಕನ್ನಡ ಟೈಪಿಸ್ಟ್ಸ್ ಆಗಿರುವವರ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೇನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಬರೀ ಟೈಪಿಸ್ಟ್ಸ್ ಆಗಿರುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ಜಿ. ಬಣಕಾರ್.—ನಾನು ಕೇಳಿರುವ ಪ್ರಶ್ನೆ ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಶೀಘ್ರಲಿಪಿಗಳಲ್ಲಿ ಪರಿಣತರಾದವರಿಗೆ ವಿಶೇಷ ಸಂಭಾವನೆಯನ್ನು ನೀಡುವ ವಿಚಾರ. ಸರ್ಕಾರ ದವರು ಗುಮಾಸ್ತರಾಗಿದ್ದು ಕನ್ನಡ ಟೈಪ್ ಮಾಡುವವರ ಬಗ್ಗೆ ಉತ್ತರ ಕೊಟ್ಟಿದ್ದೀರಿ.

Mr. SPEAKER.—What will be the policy if he is merely a Typist or a Steno learns it ? Is it the policy to pay more ?

ಶ್ರೀ ವೀರೇಂದ್ರ ಪಾಟೀರ್.—ಸಬ್ಜಕ್ಟಟು ವೆರಿಫಿಕೇಷನ್, ಸ್ಟೈಟಾಗಿ ಪಾಸಾಗಿ ಬರುವ ವರು ಕಡಿಮೆ. ಕನ್ನಡ ಟೈಪಿಸ್ಟ್ಸ್ ಯಾರು ಇದ್ದಾರೆಯೋ ಅವರು ಕನ್ನಡ ಶೀಘ್ರಲಿಪಿಯನ್ನು ಕಲಿತರೆ ಅಂತಹವರಿಗೆ ಇನ್‌ಸೆಂಟಿವ್ ಕೊಡೋಣ. ಯಾರ್ಯಾರು ಇದರಲ್ಲಿ ಪರಿಣತರಾಗಿದ್ದಾರೆಯೋ ಅಂತಹವರಿಗೂ ಇನ್‌ಸೆಂಟಿವ್ ಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಟೈಪ್‌ರೈಟಿಂಗ್ ಕಲಿತ ಗುಮಾಸ್ತರುಗಳಿಗೆ ಮಾತ್ರ ವಿಶೇಷವೇತನ ಕೊಡುತ್ತೀವೆಂದು ಹೇಳಿದ್ದೀರಿ. ಈ ಪ್ರಶ್ನೆ ಕೇಳಿರುವುದು ಯಾರ್ಯಾರು ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಶೀಘ್ರಲಿಪಿಗಳಲ್ಲಿ ಪರಿಣತರಾಗಿ ಕೆಲಸ ಮಾಡುತ್ತಿದ್ದಾರೋ ಅಂತಹವರಿಗೆ ವಿಶೇಷ ವೇತನವನ್ನು ಕೊಡುವ ವಿಚಾರ. ಬಹು ಮುಖ್ಯವಾಗಿ ಈ ವಿಧಾನಮಂಡಲದಲ್ಲಿ ಯಾರ್ಯಾರು ಕನ್ನಡ ವರದಿಗಾರರಿದ್ದಾರೆಯೋ ಅವರು ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಟೈಪ್‌ರೈಟಿಂಗ್‌ನಲ್ಲಿ ಪರಿಣಿತರಾಗಿ ಕೆಲಸಮಾಡುತ್ತಿದ್ದರೂ, ಅವರ ಕೆಲಸದ ಹೊರೆ ಜಾಸ್ತಿಯಾಗಿದ್ದರೂ, ಅಂತಹವರಿಗೆ ಯಾವ ವಿಶೇಷ ಭತ್ಯವನ್ನು ಸಹ ಕೊಡುತ್ತಾ ಇಲ್ಲ. ಆದ್ದರಿಂದ ಅವರಿಗೂ ವಿಶೇಷ ಭತ್ಯವನ್ನು ಕೊಡುವುದಕ್ಕೆ ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಪ್ರತ್ಯೇಕವಾದ ಪ್ರಶ್ನೆ ಇದೆ. ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟಹಾಗೆ ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಅದನ್ನು ವಿಚಾರಮಾಡೋಣ.

ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ, ಈಗ ಕನ್ನಡ ಆಡಳಿತ ಭಾಷೆ ಆಗಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅನೇಕ ಕಡೆ ಕನ್ನಡ ಆಡಳಿತ ಭಾಷೆ ಮಾಡಿ ಪತ್ರ ವ್ಯವಹಾರ ಮಾಡ ಬೇಕಾಗಿರುವುದರಿಂದ, ಕನ್ನಡ ಟೈಪ್‌ರೈಟರ್ಸ್ ಅನೇಕ ಕಡೆ ಹಂಚಿದ್ದೇವೆ. ಎಲ್ಲಾ ಕಡೆಯೂ ಕನ್ನಡ ಟೈಪಿಸ್ಟ್‌ಗಳು ಮತ್ತು ಶೀಘ್ರಲಿಪಿಗಾರರು ಇಲ್ಲ. ಅದಕ್ಕಾಗಿ ಯಾರು ಕನ್ನಡ ಟೈಪಿಂಗ್ ಮತ್ತು ಷಾರ್ಟ್‌ಹ್ಯಾಂಡ್ ಕಲಿಯುತ್ತಾರೋ, ಅವರಿಗೆ ಇನ್‌ಸೆಂಟಿವ್ ಕೊಡಬೇಕೆಂದು ಮಾಡಿದ್ದೇವೆ. ಆ ರೀತಿ ಅವರಿಗೆ ಸಿಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಕೇಳಿದ ಪ್ರಶ್ನೆಗೆ ಅವರು ಉತ್ತರವೇ ಹೇಳ ಲಿಲ್ಲ. ಇನ್ನೊಂದು ಸಲ ಕೇಳಲು ಅವಕಾಶ ಕೊಡಬೇಕು, ಸ್ವಾಮಿ. ನಾನು ವಿಧಾನ ಮಂಡಲದಲ್ಲಿ ಕೆಲಸಮಾಡುವ ಕನ್ನಡ ವರದಿಗಾರರಿಗೆ ಯಾವ ರೀತಿಯ ಇನ್‌ಸೆಂಟಿವ್ ಕೊಟ್ಟಿಲ್ಲ, ಅವರಿಗೆ ಕೊಡ ಬೇಕೆಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿಲ್ಲ, ಸ್ವಾಮಿ.

(ಉತ್ತರವಿಲ್ಲ)

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕನ್ನಡ ಟೈಪಿಸ್ಟ್‌ಗಳನ್ನು, ಪ್ರತ್ಯೇಕವಾಗಿ ನೇಮಕ ಮಾಡಿ ಕೊಳ್ಳುವಾಗ, ಅವರಿಗೆ ಇಂಗ್ಲಿಷ್ ಟೈಪಿಸ್ಟ್‌ಗಳಿಗೆ ಯಾವ ರೀತಿ ಸಂಬಳ ಭತ್ಯಗಳನ್ನು ಕೊಡುತ್ತೀರಿ ಅದೇ ರೀತಿ ಇವರಿಗೂ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಒಂದು ಜಿ. ಓ. ಇದೆ. ಅದನ್ನು ಬೇಕಾದರೆ ಮಾನ್ಯ ಸಭೆಯ ಮುಂದೆ ಇಡುತ್ತೇನೆ. ಮೈಸೂರು ಸ್ಟೇಟ್ ಶಾರ್ಟ್‌ಹ್ಯಾಂಡ್ ರೈಟರ್ಸ್ ಅಸೋಸಿ ಯೇಷನ್ ಪ್ರೆಸಿಡೆಂಟ್ ನೂಟಿಸಿದ್ದು, ಕನ್ನಡ ಷಾರ್ಟ್‌ಹ್ಯಾಂಡ್ ಟೈಪಿಂಗ್ ಕಲಿತವರಿಗೆ ನಾಲ್ಕು ಅಡ್ವಾನ್ಸ್ ಇಂಕ್ರಿಮೆಂಟ್ ಕೊಡಬೇಕು ಎಂದು. ಇತ್ತೀಚೆಗೆ ಕನ್ನಡ ಆಡಳಿತ ಭಾಷೆಗಳನ್ನು ಕೆಲವು ಜಿಲ್ಲೆಗಳಲ್ಲಿ ಮಾಡಿರುವುದರಿಂದ ನಾವು ಟೈಪರೈಟರುಗಳನ್ನು ಹಂಚಿದ್ದೇವೆ. ಟೈಪರೈಟರಿ ನಲ್ಲಿ ಕೆಲಸಮಾಡಬೇಕಾದರೆ, ಕನ್ನಡ ಟೈಪಿಸ್ಟುಗಳು ಬೇಕಾಗಿದ್ದಾರೆ, ಮತ್ತು ಶಾರ್ಟ್‌ಹ್ಯಾಂಡ್ ಕಲಿತವರೂ ಬೇಕಾಗಿದ್ದಾರೆ. ಇದಕ್ಕಾಗಿ, ಒಂದು ಇನ್‌ಸೆಂಟಿವ್ ರೂಪದಲ್ಲಿ ಯಾರಾದರೂ ಕಲಿಯುವುದಾದರೆ, ಕೊಡಬೇಕಾಗುತ್ತದೆ. ಇನ್ನೂ ಹೊಸತಾಗಿ ಯಾರಾದರೂ ಇದ್ದರೆ, ಅವರಿಗೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ನಮ್ಮ ವಿಧಾನ ಮಂಡಲದಲ್ಲಿ ಕೆಲಸ ಮಾಡುವ ಕನ್ನಡ ವರದಿಗಾರರು, ಕನ್ನಡ ಷಾರ್ಟ್‌ಹಾಂಡ್ ಮತ್ತು ಟೈಪಿಂಗ್ ಎಲ್ಲಾ ಮಾಡಿರುವುದರಿಂದ ಅವ ರಿಗೂ ವಿಶೇಷ ಭತ್ಯವನ್ನು ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇವರಿಗೆ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಪ್ರತ್ಯೇಕವಾದ ಗ್ರೇಡ್ ಇದೆ, ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಪಿ. ಗಂಗಾಧರ್.—ಈಗ ನನಗೆ ತಿಳಿದ ಹಾಗೆ ಇವರಿಗೆ ಏನೂ ವಿಶೇಷ ಭತ್ಯವನ್ನು ಕೊಡುತ್ತಿಲ್ಲ, ಇವರಿಗೆ ಬೇರೆ ಗ್ರೇಡ್ ಇದೆ ಎಂದು ತಾವು ಹೇಳುತ್ತೀರ್ದೀರಿ. ಹಿಂದಿನ ಮುಖ್ಯ ಮಂತ್ರಿಯವರು ಇದರ ಬಗ್ಗೆ ಇದೇ ಸಭೆಯಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಇವರನ್ನು ಸ್ಪೆಶಲ್ ಆಗಿ ಟ್ರೀಟ್ ಮಾಡುತ್ತೇವೆಂದು ಕೂಡ ಮಾನ್ಯ ನಿಜಲಿಂಗಪ್ಪನವರು ಈ ಸಭೆಯಲ್ಲಿ ಹೇಳಿ ದ್ದಾರೆ. ಆದರೆ ಅಂತದನ್ನು ಏನೂ ಇವರಿಗೆ ಇಂದಿನವರೆಗೂ ಮಾಡಿಲ್ಲ. ಆದ್ದರಿಂದ ತಾವು ಈಗಲಾದರೂ ಇಲ್ಲಿ ಕೆಲಸ ಮಾಡತಕ್ಕ ಕನ್ನಡ ವರದಿಗಾರರಿಗೆ, ವಿಶೇಷ ಭತ್ಯವನ್ನು ಕೊಡುವುದಕ್ಕೆ ಜಾಗ್ರತೆ ವಿಚಾರ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಪ್ರಶ್ನೆ ಕೇಳಿರುವುದು ಸರ್ಕಾರದವರು ಖರೀದಿ ಮಾಡಿದ ಕನ್ನಡ ಟೈಪರೈಟರುಗಳ ಸಂಖ್ಯೆ ಎಷ್ಟು ಎಂದು. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದಾಗ, ಅದಕ್ಕೆ ಸಹಾಯಕವಾಗುವಂತೆ 200 ಕನ್ನಡ ಟೈಪ್‌ರೈಟರ್ಸ್ ಹಂಚಿದ್ದೇವೆ. ಅದರ ಸಂಬಂಧವಾಗಿ ಏನಾದರೂ ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪಿಂಗ್ ಕಲಿತವರಿಗೆ ಮತ್ತು ಕಲಿಯುವವರಿಗೆ ಏನಾದರೂ ವಿಶೇಷ ಭತ್ಯವನ್ನು ಕೊಡುತ್ತೀರೋ ಎಂದು ಕೇಳಬಹುದು ಎಂದು ತಿಳಿದು ಅದಕ್ಕೆ ಬೇಕಾದಷ್ಟು ಮಾಹಿತಿ ಮಾತ್ರ ನನ್ನ ಹತ್ತಿರ ಇದೆ. ಈಗ ಅದಕ್ಕೆ ಸಂಬಂಧಪಟ್ಟ ಇತರ ಪ್ರಶ್ನೆಗಳನ್ನೂ ಕೇಳುತ್ತಿದ್ದಾರೆ. ಈ ಮನೆಯಲ್ಲಿ ಮತ್ತು ಪರಿಷತ್ತಿನಲ್ಲಿ ಕನ್ನಡ ವರದಿಯನ್ನು ಮಾಡುವ ವಿಧಾನ ಮಂಡಲದ ವರದಿಗಾರರಿಗೆ ಏನಾದರೂ ಇನ್‌ಸೆಂಟಿವ್ ಕೊಡುವುದಕ್ಕೆ ಸರ್ಕಾರ ವಿಚಾರ ಮಾಡುತ್ತಿದ್ದಾರೆಯೇ ಎಂದು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಇದು ಪ್ರತ್ಯೇಕವಾದ ಪ್ರಶ್ನೆ ಇದೆ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈಗ ಪ್ರಶ್ನೆಯನ್ನು ಕೇಳಿರಶಕ್ಕದ್ದು ಕ್ಲಿಯರ್ ಆಗಿದೆ. ಈ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಯಾವುದೇ ಇಲಾಖೆಯಲ್ಲಿ ಆಗಲಿ, ಕನ್ನಡ ಷಾರ್ಟ್‌ಹ್ಯಾಂಡ್ ಕೆಲಸ, ಕನ್ನಡ ಟೈಪಿಸ್ಟ್ ಕೆಲಸ ಯಾರು ಮಾಡುತ್ತಾರೆಯೋ ಅವರಿಗೆ ಮಾಹೆಯೊಂದಕ್ಕೆ 20–30 ರೂಪಾಯಿಗಳ ವಿಶೇಷ ವೇತನವನ್ನು ಕೊಡಲಾಗುತ್ತದೆ ಎಂದು ಹೇಳಿದ್ದೀರಿ, ಹಾಗಾದರೆ ಇದು ಎಲ್ಲಾ ಇಲಾಖೆಗಳಿಗೂ ಅಷ್ಟೇ ಆಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಕೆಲವು ಕಡೆ ಕನ್ನಡ ಟೈಪಿಸ್ಟ್‌ಗಳು ಇದ್ದಾರೆ, ಎಲ್ಲಾ ಕಡೆಗಳಲ್ಲಿಯೂ ಸಾಕಷ್ಟು ಇಂಗ್ಲೀಷ್ ಸ್ಟೆನೋಗ್ರಾಫರುಗಳು, ಮತ್ತು ಇಂಗ್ಲಿಷ್ ಟೈಪಿಸ್ಟ್‌ಗಳು ಇದ್ದಾರೆ. ಎಲ್ಲಿ ಕನ್ನಡ ಟೈಪರೈಟರುಗಳು ಬೇಕೆಂದು ಕೇಳುತ್ತಾರೆಯೋ ಅಲ್ಲಿಗೆ ಕನ್ನಡ ಟೈಪರೈಟರುಗಳನ್ನು ಕಳುಹಿಸುತ್ತೇವೆ, ಎಲ್ಲಾ ಕಡೆಗಳಿಗೂ ಕನ್ನಡ ಟೈಪಿಸ್ಟ್‌ಗಳನ್ನು ನೇಮಕ ಮಾಡ ಬೇಕಾದರೆ ಅಡ್ಮಿನಿಸ್ಟ್ರೇಷನ್ ಖರ್ಚು ಹೆಚ್ಚಾಗುತ್ತದೆ. ಸಿಬ್ಬಂದಿಗಾಗಿ ಸರ್ಕಾರದವರು ಈಗ ಹೆಚ್ಚು ಖರ್ಚು ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಇರುವ ಸಿಬ್ಬಂದಿಯಲ್ಲಿಯೇ ಅಡ್ಜಸ್ಟ್ ಮಾಡಿಕೊಳ್ಳುವ ದೃಷ್ಟಿಯಿಂದ ಕನ್ನಡ ಶೀಘ್ರಲಿಪಿ ಮತ್ತು ಕನ್ನಡ ಟೈಪ್‌ರೈಟಿಂಗ್ ಕಲಿತವರು ಯಾರು ಇದ್ದಾರೆಯೋ ಅವರು ಈ ಕೆಲಸವನ್ನು ಮಾಡಿದರೆ ಅವರಿಗೆ ಮಾಹೆಯೊಂದಕ್ಕೆ 20—30 ರೂಪಾಯಿಗಳ ವಿಶೇಷ ವೇತನವನ್ನು ಕೊಡಲಾಗುತ್ತಿದೆ. ಇದರಿಂದ ಇರುವಂತಹ ಸಿಬ್ಬಂದಿಯೇ ಅಡ್ಜಸ್ಟ್ ಆಗುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವ ಸರ್ಕಾರದ ಆಜ್ಞೆಯನ್ನು ಯಾವಾಗ ಕಾರ್ಯರೂಪಕ್ಕೆ ತರುತ್ತೀರಾ ? ಎರಡನೆಯದು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದೆ ಇರುವುದರಿಂದ ಬೆಂಗಳೂರು ಕಾರ್ಪೋರೇಷನ್ನಿನಲ್ಲಿ 10 ಕನ್ನಡ ಟೈಪರೈಟರುಗಳು ಮೂಲೆಗೆ ಬಿದ್ದಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಸಂಬಂಧದ ಸರ್ಕಾರಿ ಆಜ್ಞೆಯು ಬಹಳ ವರ್ಷಗಳ ಹಿಂದೆಯೇ ಇಷ್ಯೂ ಆಗಿದೆ, ಮತ್ತು ಕಾರ್ಯರೂಪಕ್ಕೆ ತರಲಾಗಿದೆ. ಅದನ್ನು ಕೋರ್ಟ್ ಸ್ಪೋರೇಜ್ ನಲ್ಲಿ ಇಡುವ ಪ್ರಶ್ನೆ ಬರುವುದಿಲ್ಲ. ಎಲ್ಲೆಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ತರಬೇಕೆಂದು ಸರ್ಕಾರದ ಆಜ್ಞೆಯಿಲ್ಲಿ ಇದೆಯೋ ಆ ಪ್ರಕಾರ ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ವಿಧಾನ ಮಂಡಲದಲ್ಲಿ ಕೆಲಸಮಾಡಶಕ್ಕ ಕನ್ನಡ ಟೈಪಿನ್ಟುಗಳಿಗೆ ಮತ್ತು ಸ್ಟೆನೋಗ್ರಾಫರುಗಳಿಗೆ ಬೇರೆ ಗ್ರೇಡು ಇದೆ ಆದ್ದರಿಂದ ಅವರಿಗೆ ವಿಶೇಷ ವೇತನವನ್ನು ಕೊಡುವುದಕ್ಕಾಗುವುದಿಲ್ಲ ಎಂದು. ಈ ವಿಶೇಷ ವೇತನವನ್ನು ಎಲ್ಲಾ ಡಿಪಾರ್ಟ್‌ಮೆಂಟಿನವರಿಗೂ ಕೊಡುವುದಾದರೆ ಇದೂ ಒಂದು ಡಿಪಾರ್ಟ್‌ಮೆಂಟ್ ಎಂದು ಪರಿಗಣಿಸಿ ಇವರಿಗೂ ಏತಕ್ಕೆ ವಿಶೇಷ ವೇತನವನ್ನು ಕೊಡುವುದಕ್ಕಾಗುವುದಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಇದರ ಬಗ್ಗೆ ಉತ್ತರವನ್ನು ಹೇಳುತ್ತೇನೆ.

Sri D. B. KALMANKAR.—Is there any difference in the special allowance given to the Kannada Typists and the English Typists ?

Sri VEERENDRA PATIL.—So far as Kannada Typists are concerned according to this Government Order, they are entitled for this incentive of special pay of Rs. 30 and Rs. 20.

ಶ್ರೀ ಸಿದ್ದಯ್ಯ ಕಾಶೀಮಠ.—ಕನ್ನಡ ಟೈಪಿಸ್ಟುಗಳಿಗೆ ವಿಶೇಷ ಭತ್ಯವನ್ನು ಕೊಡುವ ಬಗ್ಗೆ ಆಜ್ಞೆಯನ್ನು ಮಾಡಿದ ನಂತರ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗ ಯಾರು ಯಾರು ಪ್ರಥಮ ದರ್ಜೆಯ ಗುಮಾಸ್ತರು ಮತ್ತು ಎರಡನೆಯ ದರ್ಜೆಯ ಗುಮಾಸ್ತರು ಕನ್ನಡ ಟೈಪ್‌ರೈಟರ್ ಮತ್ತು ಕನ್ನಡ ಶೀಘ್ರ ಲಿಪಿಯಲ್ಲಿ ಪರಿಣತರಾಗಿ ಆ ಕೆಲಸವನ್ನು ಮಾಡುತ್ತಾರೆಯೋ ಯಾರು ಯಾರು ಅದಕ್ಕೆ ಅರ್ಹರಾಗುತ್ತಾರೆಯೋ ಅವರಿಗೆ ಮಾಹೆಯಾನ 20-30 ರೂಪಾಯಿಗಳ ವಿಶೇಷ ವೇತನ ಸಿಕ್ಕುತ್ತದೆ.

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ, ನಾನು ಕೇಳಿರತಕ್ಕ ಪ್ರಶ್ನೆಯಲ್ಲಿ ಪ್ರಥಮ ದರ್ಜೆಯ ಗುಮಾಸ್ತರು ಮತ್ತು ಎರಡನೆಯ ದರ್ಜೆಯ ಗುಮಾಸ್ತರು ಕನ್ನಡ ಟೈಪಿಂಗ್ ಮತ್ತು ಶೀಘ್ರಲಿಪಿ ಬರತಕ್ಕವರು ಯಾರು ಇದ್ದಾರೆಯೋ ಅವರು ಈ ರಾಜ್ಯದಲ್ಲಿ ಯಾವುದೇ ಡಿಪಾರ್ಟ್‌ಮೆಂಟಿನಲ್ಲಿ ಇರಲಿ ಅವರಿಗೆ ಹೆಚ್ಚಿನ ವೇತವನ್ನು ಕೊಡುತ್ತಿದ್ದೀರಾ ಎಂದು ಕೇಳಿದ್ದೇನೆ, ಈ ಪ್ರಶ್ನೆ ಸ್ವಲ್ಪ ದೊಡ್ಡ ದಾದರೂ ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಸಮಗ್ರವಾದ ಉತ್ತರವನ್ನು ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗ ಮಾನ್ಯ ಸದಸ್ಯರು ಕೇಳಿತಕ್ಕಂತ ಪ್ರಶ್ನೆ ಏನಿದೆ ಇದು ಜನರಲ್ ಪ್ರಶ್ನೆ. ಆದ್ದರಿಂದ ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ತರಿಸಿಕೊಡುತ್ತೇನೆ.

Collection of Taxes by the Bangalore Corporation

679. Sri M. S. KRISHNAN (Malleswaram).—

Will the Minister of State for Municipal Administration be pleasd to state :—

(*a*) whether Prakashnagar, Subramanyanagar, Shivanahalli, Agrahara Dasarahalli, Mariyappanapalya, Mathikere, Gurguntepalya come within the Corporation limits of Bangalore ;

(*b*) whether the voters in these areas have elected their representatives to the Bangalore City Corporation in the previous election ;

(*c*) whether taxes are being collected from the residents of these areas and if so by whom ;

(*d*) whether the Government is aware that more than one Government agency is collecting taxes in these places ;

(*e*) if so, the steps taken to see that taxes are collected by the Corporation only ?

Sri B. M. PATIL (Minister of State for Municipal Administration).—

(*a*) Yes.

(*b*) Yes.